**ದಿನಾಂಕಃ 20.01.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ದಾವಾ ಐಟಂ ನಂ. 6 ನಮ್ಮ ತಂದೆಗೆ ಸೇರಿದ್ದೆಂದು ನಾನು ಹೇಳಿದ್ದೇನೆ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ಸಹೋದರಿ ಜಯಮ್ಮ 10.10.1976 ರಲ್ಲಿ ಸೆಟಲ್ ಮೆಂಟ್ ಡೀಡ್ ಮೂಲಕ ಬರೆದುಕೊಟ್ಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಯಾವ ಉದ್ದೇಶಕ್ಕೆ 2ನೇ ಪ್ರತಿವಾದಿ ನನ್ನ ತಂದೆಗೆ ಸೆಟಲ್ ಮೆಂಟ್ ಡೀಡ್ ಬರೆದುಕೊಟ್ಟಿದ್ದಾರೆಂದು ಹೇಳಿಲ್ಲ ಎಂದರೆ ಸರಿ. ನನ್ನ ಸಹೋದರಿ ವಾದಿಗೆ ದಾವಾ ಐಟಂ 2ನ್ನು ವಿಭಾಗ ಮಾಡಿಕೊಟ್ಟಿರುತ್ತಾರೆಂದು ಉತ್ತರಿಸುತ್ತಾರೆ. ಆ ಬಗ್ಗೆ ದಾಖಲೆಯನ್ನು ಈ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ದಾವಾ ಐಟಂ ನಂ. 2 ವಾದಿ ಮತ್ತು ಅವರ ತಂದೆ ಸ್ವಾಧೀನದಲ್ಲಿದ್ದರು ಎಂದು ಹೇಳುತ್ತಾರೆಂದರೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ನಾನು ವಾದಿಯ ಪರವಾಗಿ ನಿಂತು ಅವರಿಗೂ ಭಾಗ ಕೊಡಿ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ ಮತ್ತು ನಾನು ವಾದಿಯ ಪರವಾಗಿ 2ನೇ ಪ್ರತಿವಾದಿ ಬಳಿ ಗಲಾಟೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ ವಾದಿ ಮತ್ತು ಪ್ರತಿವಾದಿಗಳ ತಂದೆ ತಾಯಿಯವರು ಈ ಹಿಂದೆಯೇ ತಮಗೆ ಬರಬೇಕಾದ ಭಾಗಾಂಶವನ್ನು ಪಡೆದುಕೊಂಡಿರುತ್ತಾರೆಂದು ಹೇಳಿದ್ದೇವೆ ಎಂದರೆ ಸರಿ.

ದಿನಾಂಕಃ 18.05.2014 ರಂದು ನಮ್ಮ ತಂದೆ ಹೆಸರಿನಲ್ಲಿದ್ದ ದಾವಾ ಐಟಂ 1 ರಿಂದ 3ಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿ ದೊಡ್ಡಿಂದುವಾಡಿ ಗ್ರಾಮ, ಗೌಡಗೆರೆಶೆಟ್ಟಿದೊಡ್ಡಿ ಮತ್ತು ಬೂದಬಾಳು ದೇವಸ್ಥಾನದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಬೂದಬಾಳು ಸ್ವಾಮಿಯವರ ಮಧ್ಯಸ್ಥಿಕೆಯಲ್ಲಿ ನನ್ನ ಮಾವನಾದ ಸಿದ್ದಪ್ಪಸ್ವಾಮಿ ಮತ್ತು ಶಿವಸ್ವಾಮಿ, ದೊಡ್ಡಿಂದುವಾಡಿ ಗ್ರಾಮದ ಭಾಮೈದ ಚೌಡಶೆಟ್ಟಿರವರುಗಳ ಸಮ್ಮುಖದಲ್ಲಿ ಪಂಚಾಯಿತಿ ಆಯಿತೆಂದರೆ ಸರಿಯಲ್ಲ ಮತ್ತು ಆಚಗಳ್ಳಿದೊಡ್ಡಿಯ ಶಿವಮಲ್ಲು ಸದರಿ ಪಂಚಾಯಿತಿಯಲ್ಲಿದ್ದರು ಎಂದರೆ ಸರಿಯಲ್ಲ. ಆಗ ನಾನು ವಾದಿ ಮತ್ತು ಪಂಚಾಯಿತಿಯವರ ಮೇಲೆ ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯಾದ ಗುರುಮಲ್ಲಮ್ಮರವರ ಹೆಸರಿನಲ್ಲಿದ್ದ ಸರ್ವೆ ನಂ. 516 ರಲ್ಲಿ 4.42 ಸೆಂಟ್ಸನ್ನು ಭಾಗ ಕೊಡುವಂತೆ ಪಂಚಾಯಿತಿಯಲ್ಲಿ ಬಂದಿದ್ದವರು ವಾದಿಗೆ ಕೊಡುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ರಲ್ಲಿ ಎಷ್ಟು ಎಕರೆ ಆಸ್ತಿಯನ್ನು ವಾದಿಗೆ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 2 ರಲ್ಲಿ ವಾದಿಗೆ ಭಾಗ ಕೊಟ್ಟಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ 8ನೇ ಪ್ಯಾರಾಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 17.12.2012 ರಂದು ದಾವಾ ಐಟಂ ನಂ. 2ನ್ನು 2ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿರುವ ವಿಚಾರ ವಾದಿಗೆ ತಿಳಿಯಿತು ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ವಾದಿಯ ಹೆಸರಿಗೆ ಒಪ್ಪಿತ ಪತ್ರವನ್ನು ಸೃಷ್ಟಿ ಮಾಡಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಮತ್ತೊಮ್ಮೆ ಪಂಚಾಯಿತಿ ನಡೆಯಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ 2ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಬಾರದೆಂದು ದಿನಾಂಕಃ 19.06.2015 ರಲ್ಲಿ ವಾದಿ ಮತ್ತು 11ನೇ ಪ್ರತಿವಾದಿ ತಕರಾರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಕರಾರು ಆರ್ ಆರ್ ಟಿ ತಕರಾರು ಪ್ರಕರಣ 14/2015–16 ರಡಿಯಲ್ಲಿ ನೋಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಇದಕ್ಕೆ ಸಂಬಂಧಪಟ್ಟಂತೆ ನಿಪಿ–12 ರಿಂದ ನಿಪಿ–24 ರಂತೆ ವಿಚಾರಣೆ ನಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–20 ರಂತೆ ತಾಲ್ಲೂಕು ಕಾನೂನು ಸೇವಾ ಸಮಿತಿ ಕೊಳ್ಳೇಗಾಲದ ಮುಂದೆ ವಿಚಾರಣೆ ನಡದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಐಟಂ ನಂ. 2, 2ನೇ ಪ್ರತಿವಾದಿಗೆ ಕಾನೂನುಬದ್ಧ ಆಸ್ತಿಯಾಗಿದೆ ಎಂದು 2ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಯು ಅದು ನಮ್ಮ ತಂದೆ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಮಗ ಶಿವಲಿಂಗನಿಗೆ ನನ್ನ ಮಗಳು ಜ್ಯೋತಿಯನ್ನು ಕೊಟ್ಟು ಮದುವೆ ಮಾಡಿರುತ್ತೇನೆ ಎಂದರೆ ಸರಿ. ಈವಾಗ 2ನೇ ಪ್ರತಿವಾದಿ ನನಗೆ ಅಕ್ಕ ಮಾತ್ರವಲ್ಲದೇ ಬೀಗಿತ್ತಿ ಎಂದರೆ ಸರಿ. ದಾವಾ ಐಟಂ ನಂ. 2 ರ ಆಸ್ತಿಯು 2ನೇ ಪ್ರತಿವಾದಿಯ ಭಾಗಕ್ಕೆ ಬಂದರೆ ನನ್ನ ಅಳಿಯ ಶಿವಲಿಂಗನಿಗೆ ಭಾಗ ಬರುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಜಯಮ್ಮನ ಮೂರನೇ ಮಗ ಪ್ರಕಾಶ್ ಇರುತ್ತಾರೆಂದರೆ ಸರಿ. ದಾವಾ ಐಟಂ ನಂ. 6 ರ ಆಸ್ತಿಯನ್ನು 3ನೇ ಮಗ ಪ್ರಕಾಶನಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾನ ಪತ್ರದ ಆಧಾರದ ಮೇಲೆ ಪ್ರಕಾಶನಿಗೆ ಎಂ ಆರ್ ನಂ. ಹೆಚ್ 61 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 24.09.2016 ರಲ್ಲಿ ದಾವಾ ಆಸ್ತಿಯನ್ನು ದಾವಾ ಮುಗಿಯುವ ತನಕ ಪರಭಾರೆ ಮಾಡಬಾರದೆಂದು ತಡೆಯಾಜ್ಞೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ ಕಾರಣ ಪ್ರಕಾಶನನ್ನು ಪ್ರತಿವಾದಿ 12 ಆಗಿ ಸೇಪರ್ಡೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1986 ರಲ್ಲಿ ವಾದಿಗೆ ವಿಭಾಗವಾಗಿರುವ ವಿಚಾರ ಗೊತ್ತಿತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಆ ವಿಭಾಗ ಪತ್ರವನ್ನು ವಾದಿ ನಿಗಧಿತ ಅವಧಿಯಲ್ಲಿ ಪ್ರಶ್ನೆ ಮಾಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. 1986 ರಲ್ಲಿ ವಾದಿ ಭಾಗ ಕೇಳಿದ್ದರೆ ಕೊಡುತ್ತಿದ್ದೆವು ಎಂದರೆ ಸಾಕ್ಷಿಯು ಮೊದಲೇ ಭಾಗ ಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಗೆ ಸೇರಿದ ದಾವಾ ಐಟಂ 1 ರಿಂದ 3 ರಲ್ಲಿ ವಾದಿಗೆ ಸಮವಾದ ಹಕ್ಕಿದೆ ಎಂದರೆ ಸರಿಯಲ್ಲ. ಆದರೆ ಆಕೆ ಕೇಳದ ಕಾರಣ ಭಾಗ ಕೊಟ್ಟಿಲ್ಲ ಎಂದು ನಾವು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆಕೆಗೆ ಭಾಗ ಕೊಡಲು ನಮಗೆ ಒಪ್ಪಿಗೆ ಇದೆ ಎಂದರೆ ಸರಿಯಲ್ಲ. 1986 ರಿಂದ ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ಬೇರೆ ಬೇರೆಯಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಐಟಂ ನಂ. 4 ಮತ್ತು 5ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಗಳ ಜಂಟಿ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ. 4 ಮತ್ತು 5 ನಾನು ಹೇಳುವಂತೆ ಬೇರೆ ಬೇರೆ ವ್ಯವಸಾಯ ಮಾಡುತ್ತಿದ್ದರೂ ಪಹಣಿಯಲ್ಲಿ ಪೋಡು ಆಗಿಲ್ಲ ಎಂದರೆ ಸರಿ.

ದಿನಾಂಕಃ 05.05.1986 ಮತ್ತು 07.09.1995 ರಂದು ಆಗಿರುವ ವಿಭಾಗ ಪತ್ರಗಳು ಕಾನೂನುಬದ್ಧ ದಾಖಲೆಯಾಗಿದೆ ಎಂದು ನಾನು ಹೇಳಿದ್ದೇನೆ ಎಂದರೆ ಸರಿ. ಸದರಿ ವಿಭಾಗ ಪತ್ರಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ. ವಿಭಾಗ ಪತ್ರದಲ್ಲಿ ಎಲ್ಲಾ ಪಕ್ಷಕಾರರು ಸಹಿ ಮಾಡಿದ್ದರೆ ಮಾತ್ರ ಕಾನೂನುಬದ್ಧ ದಾಖಲೆಯಾಗಿರುತ್ತದೆ. ಸದರಿ ದಾಖಲೆ ನೋಂದಣಿಯಾಗಿಲ್ಲ ಎಂದರೆ ಸರಿ. ಸದರಿ ವಿಭಾಗ ಪತ್ರ ನೋಂದಣಿಯಾಗಿಲ್ಲದ ಕಾರಣ ಕಾನೂನಿನಲ್ಲಿ ಬೆಲೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪಂಚಾಯಿತಿದಾರರ ಮುಂದೆ ವಿಭಾಗ ಪತ್ರ ಮಾಡಿಕೊಂಡಿರುವುದರಿಂದ ಅದು ಊರ್ಜಿತವಲ್ಲ ಎಂದರೆ ಸರಿಯಲ್ಲ. ದಿನಾಂಕಃ 14.10.2019 ರಂದು ವಿಭಾಗ ಪತ್ರಕ್ಕೆ ಸಂಬಂಧಪಟ್ಟಂತೆ ಸ್ಟಾಂಪ್ ಡ್ಯೂಟಿ ಕಟ್ಟಿದ್ದೇವೆಂದರೆ ಸರಿ. ದಾವಾ ಐಟಂ ನಂ. 1 ರಿಂದ 3 ರಲ್ಲಿ ವಾದಿಗೆ ಭಾಗ ಕೊಟ್ಟರೆ ನಾವು ಮಾಡಿಕೊಂಡ ದಾವಾ ಐಟಂ ನಂ. 4 ಮತ್ತು 5ಕ್ಕೆ ತೊಂದರೆಯಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಪತ್ರದಲ್ಲಿ ಕೇಳಿರುವಂತೆ ವಾದಿಗೆ ಭಾಗ ಕೊಡಲು ಒಪ್ಪಿಗೆ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.